## 1 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಟಿ.ನರಸೀಪುರ

## ಸಿ.ಸಿ ಸಂಖ್ಯೆ : 594/2026

**ಪಿರ್ಯಾದಿ** : ರಾಜ್ಯದ ಪರವಾಗಿ ತಲಕಾಡು ಪೋಲೀಸ್ ಠಾಣೆ,

**ವಿರುದ್ಧ**

**ಆರೋಪಿಗಳು** :

1. ಮಹೇಶ ಬಿನ್ ಕಾಮಯ್ಯ, 27 ವರ್ಷ.
2. ಶಿವನಾಯಕ ಬಿನ್ ದುಂಡುಮಾದಯ್ಯ, 36 ವರ್ಷ.
3. ರಂಗಸ್ವಾಮಿ ಬಿನ್ ಶಾಂತರಾಜ, 21 ವರ್ಷ.

ಎಲ್ಲರ ವಾಸಃ ಹೊಸ ಬೀದಿ, ತಲಕಾಡು ಟೌನ್,
ಟಿ.ನರಸೀಪುರ ತಾಲ್ಲೂಕು.

**ಆಪಾದನೆ**

ಶ್ರೀಮತಿ ಎನ್.ನಿವೇದಿತಾ, 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ವಿರುದ್ಧ ಮಾಡುವ ಆರೋಪಣೆ ಏನೆಂದರೆ

ದಿಃ 26/12/2026 ರಂದು ರಾತ್ರಿ 8.20 ಗಂಟೆ ಸಮಯಲ್ಲಿ ತಲಕಾಡು ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ, ತಲಕಾಡು ಗ್ರಾಮದ ಸರ್ಕಾರಿ ಆಸ್ಪತ್ರೆಯ ಮುಂಭಾಗ ಇರುವ ಸಾರ್ವಜನಿಕ ಸ್ಥಳವಾದ ಮುಸ್ಲಿಂ ಜನಾಂಗದ ಸ್ಮಶಾನದಲ್ಲಿ, ಆರೋಪಿತರಾದ ನೀವು ಸಾರ್ವಜನಿಕ ಸ್ಥಳದಲ್ಲಿ 2 ಬಿಯರ್ ಬಾಟಲ್ ಮತ್ತು 2 ಹೈವಾರ್ಡ್ಸ್ ಚೇಯರ್ಸ್ ವಿಸ್ಕಿಯ ಖಾಲಿ ಪೌಚ್‌ಗಳು ಹಾಗೂ 3 ಖಾಲಿ ಪ್ಲಾಸ್ಟಿಕ್ ಲೋಟಗಳನ್ನು ಇಟ್ಟುಕೊಂಡು ಮದ್ಯಸೇವನೆ ಮಾಡುತ್ತಿರುವುದು ಹಾಗೂ ಅಕ್ರಮವಾಗಿ ಹಾಗೂ ಯಾವುದೇ ಪರವಾನಿಗೆ ಇಲ್ಲದೆ, ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದು, ಆ ಮೂಲಕ ಆರೋಪಿಯಾದ ನೀವು ಕರ್ನಾಟಕ

ಅಬಕಾರಿ ಕಾಯ್ದೆ ಕಲಂ **15(A), 32(3)** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಪ್ರಶ್ನೆ: 1: ಆರೋಪಣೆ ಓದಿ ಹೇಳಿದುದು ಅರ್ಥವಾಯಿತೇ?
ಉತ್ತರ : 1 ನೇ ಆರೋಪಿ
ಉತ್ತರ : 2 ನೇ ಆರೋಪಿ
ಉತ್ತರ : 3 ನೇ ಆರೋಪಿ

ಪ್ರಶ್ನೆ: 2: ಶಿಕ್ಷೆಗೆ ಒಪ್ಪುತ್ತೀರೋ ಅಥವಾ ನಿಮ್ಮದೇನಾದರೂ ವಿಚಾರಣೆಯಾಬೇಕಾ ?
ಉತ್ತರ : 1 ನೇ ಆರೋಪಿ
ಉತ್ತರ : 2 ನೇ ಆರೋಪಿ
ಉತ್ತರ : 3 ನೇ ಆರೋಪಿ

ಈ ಮೇಲಿನ ಆರೋಪಣೆಯನ್ನು ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿದ ನಂತರ ಅವರು ನೀಡಿದ ಉತ್ತರವನ್ನು ನನ್ನ ಸ್ವಂತ ಬರಹದಲ್ಲಿ ದಾಖಲೆ ಮಾಡಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿಃ 02/03/2026

**ಓ ಹೇ ಕೇ ಸ ಇ ಓ**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ ದಂ., ಟಿ.ನರಸೀಪುರ.**

ಪ್ರಕರಣವನ್ನು ಕರೆಯಲಾಯಿತು. ಆರೋಪಿತರು ಹಾಜರಿದ್ದು ದೋಷಾರೋಪಣಾ ಪತ್ರವನ್ನು ಒದಗಿಸಲಾಯಿತು. ಆರೋಪಣೆಯನ್ನು ಆರೋಪಿತರಿಗೆ ಓದಿ ಹೇಳಲಾಗಿ, ಅರ್ಥೈಸಿಕೊಂಡು ತಮ್ಮ ತಪ್ಪನ್ನು ಒಪ್ಪಿಕೊಂಡಿರುಸತ್ತಾರೆ. ಅವರ ತಪ್ಪೊಪ್ಪಿಗೆಯು ಸ್ವ-ಇಚ್ಛೆಯಿಂದ ಕೂಡಿದ್ದೆಂದು ಮನವರಿಕೆಯಾಗಿದೆ.

ಆದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ.15(**A**) ಮತ್ತು 32(3)ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕೆ ಆರೋಪಿತರಿಗೆ ಶಿಕ್ಷೆ ವಿಧಿಸಿದ್ದು ತಲಾ ರೂ.1,000/- ದಂಡವನ್ನು ಪಾವತಿಸತಕ್ಕದ್ದು ಎಂದು ಆದೇಶಿಸಿರುತ್ತೇನೆ.

**Call before Lok Adalath by** 14/03/2026.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ ದಂ., ಟಿ.ನರಸೀಪುರ.**